ಪ್ರಜಾವಾಣಿ
ಕಾಮನಬಿಲ್ಲು

ಸೂರ್ಯೋದಯ ಕೂಡಾ ಸೂರ್ಯಾಸ್ತದಷ್ಟೇ ಸುಂದರವಾಗಿರುತ್ತದೆ. ಜನಜಂಗುಳಿಯೂ ಕಡಿಮೆ.

–ನಸುಕಿನಲ್ಲೇ ಎದ್ದ ಹುಡುಕನ ಅನಿಸಿಕೆ

ನಾನು ಕಂಡ ವಿವೇಕಾನಂದ

ಡಾ.ಆರ್. ಬಾಲಸುಬ್ರಹ್ಮಣ್ಯಂ

# ಶರಧಿಯ ಮೊರೆತ ಬಂಡೆಗಲಿನ ಸೆಳೆತ

ನಮ್ಮ ರಾಷ್ಟ್ರದ ದಕ್ಷಿಣದ ತುತ್ತ ತುದಿ ತಮಿಳುನಾಡಿನ ಕನ್ಯಾಕುಮಾರಿ. ಇದು ಕೇರಳದ ರಾಜಧಾನಿ ತಿರುವನಂತಪುರದಿಂದ 90 ಕಿ.ಮೀ ದೂರದಲ್ಲಿದೆ. ತಮಿಳುನಾಡಿನ ಮತ್ತೊಂದು ಹೆಸರಾಂತ ದೇಗುಲಗಳ ಪಟ್ಟಣವಾದ ನಾಗರಕೋಯಿಲ್‌ನಿಂದ ಇಲ್ಲಿಗಿರುವ ಅಂತರ 20 ಕಿ.ಮೀ. ಆಕರ್ಷಕ ಪ್ರವಾಸಿ ತಾಣವಾಗಿ ರೂಪುಗೊಂಡಿರುವ ಕನ್ಯಾಕುಮಾರಿಗೆ ಭೇಟಿ ನೀಡಿದವರು, ಅಲ್ಲಿನ ವಿವೇಕಾನಂದ ಸ್ಮಾರಕ ಬಂಡೆಗೆ (ವಿವೇಕಾನಂದ ರಾಕ್ ಮೆಮೋರಿಯಲ್) ತೆರಳದೇ ವಾಪಸಾಗುವುದಿಲ್ಲ.

ವಿವೇಕಾನಂದರು ಕನ್ಯಾಕುಮಾರಿಗೆ ಭೇಟಿ ನೀಡಿದ್ದು 1892ರ ಡಿಸೆಂಬರ್‌ನಲ್ಲಿ. ಅದಕ್ಕೆ ಮುನ್ನ ತಿರುವನಂತಪುರಕ್ಕೆ ತೆರಳಿದ್ದ ಅವರು ಅಲ್ಲಿ ಕೆಲವು ದಿನಗಳನ್ನು ಕಳೆದಿದ್ದರು. 1892ರ ಡಿಸೆಂಬರ್ 22ರಂದು ಮನ್ಮಥಬಾಬು ಎಂಬುವವರೊಂದಿಗೆ ನಾಗರಕೋಯಿಲ್‌ಗೆ ಹೋಗಿದ್ದರು. ಅಲ್ಲಿ ಎರಡು–ಮೂರು ದಿನ ತಂಗಿದ್ದ ಅವರು, ಅದೇ 24 ಅಥವಾ 25ರಂದು ಕನ್ಯಾಕುಮಾರಿ ತಲುಪಿದರು ಎನ್ನಲಾಗಿದೆ. ಸ್ವಾಮೀಜಿ ಕನ್ಯಾಕುಮಾರಿಗೆ ಹೋದಾಗ ಅಲ್ಲಿ ಅವರ ಮನಸ್ಸಿನೊಳಗೆ ಮೂಡಿದ ಭಾವನೆಗಳೇನು ಎಂಬುದನ್ನು ನಾವು ಅರ್ಥ ಮಾಡಿಕೊಳ್ಳಬಹುದು.

ವಿವೇಕಾನಂದರು ಕನ್ಯಾಕುಮಾರಿಗೆ ಭೇಟಿ ನೀಡುವ ವೇಳೆಗಾಗಲೇ ರಾಷ್ಟ್ರದ ಉದ್ದಗಲವನ್ನು ಸುತ್ತಿದ್ದರು; ಕಾಡು ಮೇಡು, ಹಿಮಾಲಯ, ದೊಡ್ಡ ಪಟ್ಟಣಗಳು, ನಗರಗಳನ್ನೆಲ್ಲಾ ಹಾದು ಹೋಗಿದ್ದರು. ಮಹಾರಾಜರಿಂದ ಹಿಡಿದು ಬೀದಿಗೆ ಬಿದ್ದವರ ತನಕ ಎಲ್ಲ ವರ್ಗದ ಜನರನ್ನೂ ಭೇಟಿಯಾಗಿ ಅವರೊಡನೆ ಮಾತುಕತೆ ನಡೆಸಿದ್ದರು. ಭಾರತ ಮಾತೆ ಹಾಗೂ ಆಕೆಯ ಪರಿವಾರದ ಬಗ್ಗೆ ಅಪರಿಮಿತ ಪ್ರೀತಿ ಹೊಂದಿದ್ದ ಅವರು, ಎರಡೂವರೆ ವರ್ಷಗಳ ಕಾಲ ಕಾಲ್ನಡಿಗೆ, ಎತ್ತಿನ ಬಂಡಿ ಹಾಗೂ ರೈಲಿನ ನೆರವಿನಿಂದ ರಾಷ್ಟ್ರ ಪರ್ಯಟನೆ ಮಾಡಿದ್ದರು.

ಅವರು ಮೊದಲು ಕನ್ಯಾಕುಮಾರಿಯಲ್ಲಿನ ದೇವಸ್ಥಾನಕ್ಕೆ ಹೋಗಿ, ಸ್ವಲ್ಪ ಹೊತ್ತು ಪ್ರಾರ್ಥನೆ ಮತ್ತು ಧ್ಯಾನ ಮಗ್ನರಾದರು. ತಾಯಿ ಪಾರ್ವತಿಯ ದರ್ಶನದ ನಂತರ ಹೊರಬಂದು ಸಮೀಪದ ಕಡಲ ತಡಿಯಲ್ಲಿ ನಿಂತರು. ಸಾಗರವನ್ನು ದಿಟ್ಟಿಸಿ ನೋಡುತ್ತಾ ನಿಂತ ಅವರಿಗೆ ಎರಡು ಫರ್ಲಾಂಗುಗಳಷ್ಟು ದೂರದಲ್ಲಿ ಎರಡು ದೊಡ್ಡ ಬಂಡೆಗಳು ಕಣ್ಣಿಗೆ ಬಿದ್ದವು. ಪುರಾಣಗಳ ಪ್ರಕಾರ, ಈ ಬಂಡೆಗಳ ಪೈಕಿ ದೊಡ್ಡದಾದ, ದೂರದಲ್ಲಿರುವ ಬಂಡೆಯು ದಿವ್ಯ ಪಾರ್ವತಿ ಮಾತೆಯ 'ಶ್ರೀಪಾದ'ವಾಗಿದ್ದು, ಇದು ಪಾರ್ವತಿ ತಪಸ್ಸು ಮಾಡಿದ ತಾಣವೆಂದೇ ಪ್ರತೀತಿ ಇದೆ.

ಈ ಬಂಡೆಗಳನ್ನು ನೋಡುತ್ತಿದ್ದಂತೆಯೇ, ಸ್ವಾಮೀಜಿಗೆ ಅಲ್ಲಿಗೆ ತೆರಳಬೇಕೆಂಬ ಅದಮ್ಯ ಬಯಕೆ ಮೂಡಿತು. ಅಲ್ಲಿಗೆ ತನ್ನನ್ನು ಕರೆದುಕೊಂಡು ಹೋಗುವಿರಾ ಎಂದು ಕೆಲವು ಅಂಬಿಗರನ್ನು ಕೇಳಿದರು. ಅವರು ಸ್ವಾಮೀಜಿಯನ್ನು ಅಲ್ಲಿಗೆ ಕರೆದುಕೊಂಡು ಹೋಗಲು ಸಿದ್ಧರಿದ್ದರಾದರೂ, ಅದಕ್ಕಾಗಿ ಹಣ ಕೇಳಿದರು. ಆದರೆ ಆಗ ಸ್ವಾಮೀಜಿಯ ಬಳಿ ಒಂದು ನಯಾ ಪೈಸೆಯೂ ಇರಲಿಲ್ಲ. ಆಮೇಲೆ ಏನು ಸಂಭವಿಸಿತೋ ಅದು ಚಿರಸ್ಮರಣೀಯ. ಹೆಚ್ಚು ಯೋಚಿಸುತ್ತಾ ಕೂರದ ಸ್ವಾಮೀಜಿ, ಅಲೆಗಳು ಭೋರ್ಗರೆಯುತ್ತಿದ್ದ ಸಾಗರಕ್ಕೆ ಧುಮುಕಿಯೇ ಬಿಟ್ಟರು. ಅಲ್ಲೇ ಇದ್ದ ಅನುಭವಿ ಅಂಬಿಗರು ಇದನ್ನು ನೋಡಿ ಹೌಹಾರಿದರು. ದಡಕ್ಕೆ ವಾಪಸು ಬರುವಂತೆ ಜೋರಾಗಿ ಕೂಗಿಕೊಂಡರು. ಪ್ರಚಂಡ ಅಲೆಗಳು ಹಾಗೂ ಅಪಾಯಕಾರಿ ಶಾರ್ಕ್ ಮೀನುಗಳು ಇರುವ ಬಗ್ಗೆ ಎಚ್ಚರಿಸಿದರು. ಆದರೆ ಅದಕ್ಕೆಲ್ಲಾ ಎದೆಗುಂದದ ಸ್ವಾಮೀಜಿ ಯಶಸ್ವಿಯಾಗಿ ನಿಗದಿತ ಜಾಗ ಸೇರಿ, ಬಂಡೆ ಏರಿದರು.

ಸ್ವಾಮೀಜಿ ಅಲ್ಲಿ ಮೂರು ಹಗಲು ಹಾಗೂ ಮೂರು ರಾತ್ರಿಗಳನ್ನು ಕಳೆದರು. ಆಗ ಅವರ ಜತೆ ಇದ್ದುದು ಮೊರೆಯುತ್ತಿದ್ದ ಸಮುದ್ರ ಮಾತ್ರ. ಭಾರತದ ಕಟ್ಟಕಡೆಯ ಆ ಕಲ್ಲಿನ ಮೇಲೆ ಕುಳಿತ ಅವರು ರಾಷ್ಟ್ರದ ವರ್ತಮಾನ ಹಾಗೂ ಭವಿಷ್ಯಗಳ ಬಗ್ಗೆ ತೀವ್ರ ಧ್ಯಾನಸ್ಥರಾದರು. ಭಾರತ ಮಾತೆಯ ಅಧೋಗತಿಗೆ ಮೂಲ ಕಾರಣವೇನೆಂಬುದನ್ನು ಶೋಧಿಸಿದರು. ತಮ್ಮಲ್ಲಿದ್ದ ಋಷಿಯ ದರ್ಶನ ಶಕ್ತಿಯ ನೆರವಿನಿಂದ, ರಾಷ್ಟ್ರವು ಭವ್ಯತೆಯ ಉತ್ತುಂಗದಿಂದ ಅಧೋಗತಿಯ ಪ್ರಪಾತಕ್ಕೆ ಕುಸಿಯಲು ಕಾರಣವೇನೆಂಬುದನ್ನು ಅರ್ಥೈಸಿಕೊಂಡರು. ಗಾಳಿ ಮತ್ತು ಅಲೆಯ ಬಡಿತದ ಶಬ್ದ ಮಾತ್ರ ಕೇಳುತ್ತಿದ್ದ ಆ ತಾಣದಲ್ಲಿ, ಭಾರತದ ಉದ್ದೇಶ ಮತ್ತು ಸಾಧನೆಯ ಕುರಿತು ಅವಲೋಕಿಸಿದರು. ಭಾರತೀಯ ಸಂಸ್ಕೃತಿಯ ವಾಸ್ತವ ಮತ್ತು ಸಾಮರ್ಥ್ಯಗಳನ್ನು ಗ್ರಹಿಸಿದರು. ಇಡೀ ಭಾರತವನ್ನು ಸಮಷ್ಟಿ ಪ್ರಜ್ಞೆಯಿಂದ ನೋಡಿದರು. ಧರ್ಮವೆಂಬುದು ಭಾರತದ ಲಕ್ಷಾಂತರ ಜನರ ಜೀವನಾಡಿ ಎಂಬುದು ಅವರಿಗೆ ಗೋಚರವಾಯಿತು. 'ಭಾರತವನ್ನು ಸರ್ವಕಾಲಕ್ಕೂ ಸಲ್ಲುವ, ನಂಬಿಕೆಯ ತೊಟ್ಟಿಲು ಮಾಡಿರುವ ಪರಮೋಚ್ಚ ಆಧ್ಯಾತ್ಮಿಕ ಪ್ರಜ್ಞೆಯ ಪುನಶ್ಚೇತನ ಹಾಗೂ ಪುನರುತ್ಥಾನದಿಂದ ಮಾತ್ರ ದೇಶ ಪುನಃ ಮೇಲೆದ್ದು ನಿಲ್ಲಲು ಸಾಧ್ಯ' ಎಂದು ಆ ಏಕಾಂತದಲ್ಲಿ ಅವರ ಹೃದಯಕ್ಕೆ ಭಾಸವಾಯಿತು. ಭಾರತ ಮಾತೆಯ ಹಿರಿಮೆಯನ್ನು ಅವರು ಕಂಡರು; ಆಕೆಯ ದೌರ್ಬಲ್ಯಗಳನ್ನು ಕಂಡರು; ಜತೆಗೆ ಪ್ರಸ್ತುತ ರಾಷ್ಟ್ರವು ತನ್ನತನವೆಂಬುದನ್ನು ಕಳೆದುಕೊಂಡಿದೆ ಎಂಬ ಪ್ರಮುಖ ಅಂಶವನ್ನೂ ಅವರು ಮನಗಂಡರು.

ಆ ಕ್ಷಣದಲ್ಲಿ, ಏಕಾಗ್ರಚಿತ್ತದ ಸನ್ಯಾಸಿಯು ಒಬ್ಬ ಸುಧಾರಕನಾಗಿ, ರಾಷ್ಟ್ರ ನಿರ್ಮಾತೃವಾಗಿ, ಜಗತ್ತಿನ ವಾಸ್ತುಶಿಲ್ಪಿಯಾಗಿ ಪರಿವರ್ತನೆಗೊಂಡಿದ್ದರು. ಭಾರತದ ಬಡತನದ ಬಗ್ಗೆ ಅವರಲ್ಲಿ ದಿಗಿಲು ಮೂಡಿತು.

ಜನಸಮೂಹದಿಂದ ಹೊರತಾದ ಧರ್ಮದಿಂದ ಏನು ಪ್ರಯೋಜನ ಎಂಬ ಚಿಂತೆ ಅವರಲ್ಲಿ ಮೂಡಿತು. ಎಲ್ಲೆಡೆಯೂ, ಎಲ್ಲ ಕಾಲದಲ್ಲೂ ಬಡವರನ್ನು ದಮನಿಸಲಾಗಿದೆ. ಪುರೋಹಿತಶಾಹಿಯ ಪ್ರಾಬಲ್ಯ, ಜಾತಿಯ ದಬ್ಬಾಳಿಕೆ, ಸಾಮಾಜಿಕ ವ್ಯವಸ್ಥೆಯಲ್ಲಿ ಇವು ಸೃಷ್ಟಿಸಿದ ಕ್ರೂರ ವಿಭಜನೆ– ಇವು ರಾಷ್ಟ್ರದ ಪ್ರಗತಿಗೆ ಅಡ್ಡಿಯಾಗಿರುವ ಬಲು ದೊಡ್ಡ ತೊಡಕುಗಳು ಎಂದು ಅವರಿಗೆ ಅನ್ನಿಸಿತು. ಮಹಾನ್ ಸಹಿಷ್ಣುಗಳಾದ ಜನಸಾಮಾನ್ಯರಿಗಾಗಿ ಅವರ ಹೃದಯ ಮಿಡಿಯಿತು. ಅವರ ಬೇಗುದಿಯನ್ನು ತಾನು ಹಂಚಿಕೊಳ್ಳುತ್ತಿದ್ದೇನೆಂಬ ಭಾವನೆ ಮೂಡಿತು; ಅವರ ಅವನತಿ ತನಗಾದ ಅಪಮಾನ ಅನ್ನಿಸಿತು. ಧರ್ಮದ ವಾರಸುದಾರರು ಎಂದು ಬೀಗುವವರು ಶತ ಶತಮಾನಗಳ ಕಾಲ ಅದು ಹೇಗೆ ಜನಸಮೂಹವನ್ನು ಶೋಷಿಸಿದ್ದಾರೆ ಎಂಬುದನ್ನು ಯೋಚಿಸಿದಾಗ ಅವರ ಹೃದಯ ನೋವಿನ ಮಡುವಾಯಿತು.

ಸ್ವಾಮೀಜಿ 1894ರ ಮಾರ್ಚ್ 19ರಂದು ಷಿಕಾಗೊದಿಂದ ಸ್ವಾಮಿ ರಾಮಕೃಷ್ಣಾನಂದರಿಗೆ ಬರೆದ ಪತ್ರದಿಂದ, ಅವರ ಕನ್ಯಾಕುಮಾರಿಯ ಬಂಡೆಯ ಮೇಲಿನ ಧ್ಯಾನದ ಮಹತ್ವವನ್ನು ಅರಿಯಬಹುದು. ಅದರ ಒಕ್ಕಣೆ ಹೀಗಿದೆ: 'ಮನಸ್ಸನ್ನು ಮುತ್ತಿದ ಇವೆಲ್ಲಾ ಚಿಂತನೆಗಳಿಂದಾಗಿ, ಮುಖ್ಯವಾಗಿ ಬಡತನ ಮತ್ತು ಅಜ್ಞಾನದ ಬಗೆಗೆ ಯೋಚಿಸಿದಾಗ, ನನಗೆ ನಿದ್ದೆಯೇ ಬರಲಿಲ್ಲ. ತಾಯಿ ಕುಮಾರಿಯ ದೇವಸ್ಥಾನದಲ್ಲಿ, ಭಾರತ ಮಾತೆಯ ಕಟ್ಟಕಡೆಯ ಬಂಡೆಯ ಮೇಲೆ ಕುಳಿತಿದ್ದಾಗ ನನ್ನಲ್ಲಿ ಯೋಜನೆಯೊಂದು ಹೊಳೆಯಿತು: ನಾವು ಇಷ್ಟೊಂದು ಸನ್ಯಾಸಿಗಳು ಅಲೆದಾಡುತ್ತಾ, ಜನರಿಗೆ ತಾತ್ವಿಕ ಮೀಮಾಂಸೆ ಬೋಧಿಸುವುದೆಲ್ಲಾ ಹುಚ್ಚಾಟವೇ ಸರಿ. ಹಸಿದ ಹೊಟ್ಟೆಯು ಧರ್ಮ ಬೋಧನೆಗೆ ಸೂಕ್ತವಲ್ಲ ಎಂದು ನಮ್ಮ ಗುರು ಹೇಳುತ್ತಿರಲಿಲ್ಲವೇ? ಆ ಬಡವರು ಹೀನಾಯವಾಗಿ ಬದುಕು ಸಾಗಿಸುತ್ತಿರುವುದಕ್ಕೆ ಅಜ್ಞಾನವೇ ಕಾರಣ. ನಾವು ಇಷ್ಟೊಂದು ವರ್ಷಗಳ ಕಾಲ ಅವರ ರಕ್ತವನ್ನು ಹೀರುತ್ತಾ, ನಮ್ಮ ಕಾಲ ಅಡಿ ಹೊಸಕಿ ಹಾಕಿದ್ದೇವೆ'.

ಆದರೆ, ಇದಕ್ಕೆ ಪರಿಹಾರ ಏನು? ತ್ಯಾಗ ಮತ್ತು ಸೇವೆಗಳೇ ಭಾರತದ ಅವಳಿ ಆದರ್ಶಗಳಾಗಬೇಕೆಂದು ಕಾಂತಿಯುತ ಕಣ್ಣುಗಳ ಸ್ವಾಮೀಜಿಗೆ ಅನ್ನಿಸಿತು. ರಾಷ್ಟ್ರದ ಜನಜೀವನವನ್ನು ಈ ಆದರ್ಶಗಳ ಬುನಾದಿಯ ಮೇಲೆ ಕಟ್ಟಲು ಸಾಧ್ಯವಾಗಿದ್ದೇ ಆದರೆ ಉಳಿದೆಲ್ಲ ಸಮಸ್ಯೆಗಳಿಗೂ ಪರಿಹಾರ ಕಂಡುಕೊಳ್ಳಬಹುದು ಎಂದುಕೊಂಡರು. ಮೂರು ದಿನಗಳ ನಿರಂತರ ಹಾಗೂ ತೀವ್ರ ಧ್ಯಾನದ ನಂತರ ಸ್ವಾಮೀಜಿ ಮುಂದಿನ ದಶಕದಲ್ಲಿ ತಾವು ಸಾಧಿಸಿದ ಕಾರ್ಯ ಯೋಜನೆಯನ್ನು ಮನದಾಳದಲ್ಲಿ ಪಡಿಮೂಡಿಸಿಕೊಂಡಿದ್ದು ಇದೇ ತಾಣದಲ್ಲಿ.

## ಇನ್‌ಬಾಕ್ಸ್

ಕೃಷಿಗೆ ವಿದಾಯ ಹೇಳಬೇಕೆಂದು ಹೊರಟ ಅನೇಕರಿಗೆ 'ಬಂಗಾರದ ಮನುಷ್ಯ' ಆಟೊ ನಾಗರಾಜ್ ಅವರ ಬದುಕು ಹೊಸ ದಾರಿಯನ್ನು ತೋರಿಸುತ್ತಿದೆ. ಸುದೇಶ್ ದೊಡ್ಡಪಾಳ್ಯ ಅವರು ನಾಗರಾಜ್ ಅವರ ಬದುಕನ್ನು ರೂಪಿಸಿರುವ ಬಗೆಯೂ ಚೆನ್ನಾಗಿದೆ. ಕಳೆದ ಹಲವಾರು ಸಂಚಿಕೆಗಳಲ್ಲಿ ಇಂತಹ ಲೇಖನಗಳು ಮೇಲಿಂದ ಮೇಲೆ ಮೂಡಿಬರುತ್ತಿರುವುದು ನಿಜಕ್ಕೂ ಶ್ಲಾಘನಾರ್ಹ. ಡಾ.ಆರ್ .ಬಾಲಸುಬ್ರಹ್ಮಣ್ಯ ಅವರು ಬರೆಯುತ್ತಿರುವ ಲೇಖನಗಳು ನಿಜಕ್ಕೂ ಶ್ರೇಷ್ಠ ಮಟ್ಟದಲ್ಲಿದೆ. ಉಳಿದಂತೆ ನನ್ನಕಥೆ, ಗ್ಯಾಜೆಟ್ ಲೋಕ ಎಲ್ಲ ಕಾಮನಬಿಲ್ಲು ಓದುಗರಿಗೆ ಉತ್ತಮವಾದ ಮಾಹಿತಿಯನ್ನು ನೀಡುತ್ತಿದೆ. ಪುರವಣಿಯ ಕೊನೆಯ ಪುಟದಲ್ಲಿ ಪ್ರಕಟವಾಗುತ್ತಿರುವ ಕಿರು ವ್ಯಕ್ತಿ ಪರಿಚಯ ಬಹಳ ಪರಿಣಾಮಕಾರಿ ಮಾಹಿತಿಯನ್ನು ನಿಡುತ್ತಿದೆ.

– ಸಂಜಯ ನಾವಿ, ಬಾಗಲಕೋಟೆ

ಆಟೋರಿಕ್ಷಾ ಓಡಿಸುತ್ತಿದ್ದ ನಾಗರಾಜ್ ನೇಗಿಲಯೋಗಿಯಾಗಿ ಮಾದರಿ ಕೃಷಿಕನಾದದ್ದನ್ನು ಓದಿ ಸಂತೋಷವಾಯಿತು. ಎಲ್ಲವನ್ನೂ ಮೆಟ್ಟಿ ಆತ್ಮಸ್ಥೈರ್ಯದಿಂದ ಭೂಮಿ ತಾಯಿಯನ್ನು ನಂಬಿ ಕೃಷಿ ಮಾಡಿ ಲಕ್ಷಾಂತರ ರೂಪಾಯಿ ದುಡಿಯುತ್ತಿರುವ ನಾಗರಾಜ್ ಅವರ ಬದುಕು ಉಳಿದವರಿಗೆ ಮಾದರಿಯಾಗಲಿ.

– ನ. ಮುನಿನಂಜಪ್ಪ ರೆಡ್ಡಿ, ಕೆಂಗೇರಿ ಉಪನಗರ, ಬೆಂಗಳೂರು

ಏರುತ್ತಿರುವ ಪೆಟ್ರೋಲ್ ದರದ ನಡುವೆಯೂ ಹೊಸ ಹೊಸ ವಾಹನಗಳು ರಸ್ತೆಗೆ ಇಳಿಯುತ್ತಲೇ ಇವೆ. ಈ ಹೊತ್ತಿನಲ್ಲಿ ಯಮಹಾ ಅಗ್ಗದ ಬೈಕ್ ತಯಾರಿಕೆಗೆ ಹೊರಟಿರುವುದು ಕುತೂಹಲಕರ. ಈ ವಾಹನ ಪೆಟ್ರೋಲ್‌ನಲ್ಲಿ ಕಳೆದುಕೊಳ್ಳುವುದನ್ನು ತನ್ನ ಬೆಲೆಯಲ್ಲಿ ತುಂಬಿಸಿಕೊಡಬಹುದಾದ ಒಂದು ಸಾಧ್ಯತೆ ಇದೆ–ಈ ವಾಹನದ ಮೈಲೇಜ್ ತನ್ನ ಪ್ರತಿಸ್ಪರ್ಧಿಗಳಿಗಿಂತ ಹೆಚ್ಚಿದ್ದರೆ!

– ಸುರೇಶ ಕೊಂಡೆ, ಬೀದರ್

ಆಟೋ ನಾಗರಾಜ್ ಕುರಿತ ಲೇಖನ ರೈತರಿಗೆ ಸ್ಫೂರ್ತಿ ತುಂಬುವಂಥದ್ದು. ನಿರಾಶೆಯಂಚಿಗೆ ತಲುಪಿದ ನಂತರವೂ ಹೊಸ ಬದುಕನ್ನು ನಾಗರಾಜ್ ಅವರಿಗೆ ಕಂಡುಕೊಳ್ಳಲು ಸಾಧ್ಯವಾಯಿತು. ಇದು ಎಲ್ಲಾ ರೈತರಿಗೆ ಆಗಲಿ ಎಂದು ಹಾರೈಸೋಣ.

– ರಾಜೇಶ್ ಎಂ.ಬಿ. ಮೊಗನೂರು (ಮಳವಳ್ಳಿ)

ವಾಹನಗಳ ಕುರಿತಂತೆ ಅತ್ಯುತ್ತಮ ಮಾಹಿತಿಗಳನ್ನು 'ಕಾಮನಬಿಲ್ಲು' ನೀಡುತ್ತಿದೆ. ಪ್ರತೀವಾರ ಹೊಸತಾಗಿ ಬಿಡುಗಡೆಯಾಗಿರುವ ವಾಹನಗಳ ಬಗ್ಗೆ ಮಾಹಿತಿ ನೀಡುತ್ತಿದ್ದ 'ಆನ್ ರೋಡ್' ಅಂಕಣ ಇತ್ತೀಚೆಗೆ ಕಾಣೆಯಾಗಿದೆ. ಅದನ್ನು ಮತ್ತೆ ಆರಂಭಿಸಬೇಕೆಂದು ವಿನಂತಿಸುತ್ತೇನೆ.

– ಎಲ್.ಟಿ. ಪ್ರಕಾಶ್, ಮಂಡ್ಯ

## ಆಟೊ ಟೆಕ್

ಆಟೊರಿಕ್ಷಾ ಚಾಲನೆಗೆ ಅನುಕೂಲವಾಗುವಂತೆ ಅನೇಕ ತಂತ್ರಜ್ಞಾನಗಳು ಅಭಿವೃದ್ಧಿ ಹೊಂದಿರುವಂತೆಯೇ, ಆಟೊರಿಕ್ಷಾ ಪ್ರಯಾಣಿಕರಿಗೂ ಅನುಕೂಲವಾಗುವಂತಹ ಅನೇಕ ಸೌಲಭ್ಯಗಳನ್ನು ಅಭಿವದ್ಧಿ ಪಡಿಸಲಾಗಿದೆ. ಪ್ರಯಾಣಿಕ ತಾನೆಷ್ಟು ದೂರ ಪ್ರಯಾಣಿಸಬೇಕು, ಪ್ರಯಾಣದ ಗುರಿ ಏನು ಎಂದು ತಿಳಿದಿದ್ದರೆ ಮಾತ್ರ ಸಾಲದು. ಅವನ್ನು ಚಾಲಕನಿಗೆ ತಿಳಿಸುವ ಹಾಗೂ ತಾನು ನಿಖರವಾಗಿ ಇಂತಿಷ್ಟೇ ದೂರ ಪ್ರಯಾಣಿಸಿದ್ದೇನೆ ಎಂದು ಖಚಿತ ಪಡಿಸಿಕೊಳ್ಳುವುದೂ ಅಷ್ಟೇ ಮುಖ್ಯ. ಅದಕ್ಕಾಗಿ ಪ್ರಯಾಣಿಕನಿಗಿರುವ ಮುಖ್ಯ ಸೌಲಭ್ಯ ಮೀಟರ್. ರಿಕ್ಷಾ ಮೀಟರ್ ಹಿಂದಿನಂತೆ ಕೇವಲ ಪ್ರಯಾಣಿಸಿದ ದೂರವನ್ನು ಕಿಲೋ ಮೀಟರ್ ಲೆಕ್ಕದಲ್ಲಷ್ಟೇ ತೋರಿಸದೆ, ತೆಗೆದುಕೊಂಡ ಸಮಯವನ್ನೂ ಈಗ ತೋರಿಸುತ್ತದೆ. ರಿಕ್ಷಾ ನಿಂತರೆ ಕಾಯುವ ಸಮಯವನ್ನೂ ತೋರುತ್ತದೆ. ತಂತ್ರಜ್ಞಾನ ದಿನೇ ದಿನೇ ಬೆಳೆಯುತ್ತಲೇ ಇದೆ.



### ರಿಕ್ಷಾ ವರ್ಮ್

ತಂತ್ರಜ್ಞಾನ ಎಷ್ಟೇ ಬೆಳೆದರೂ ರಿಕ್ಷಾ ಮೀಟರ್ ಹಿಂದಿನ ಜೀವ ರಿಕ್ಷಾ ಮೀಟರ್ ವರ್ಮ್ ಮಾತ್ರ ಬದಲಾಗೇ ಇಲ್ಲ. ವರ್ಮ್ ಎಂದರೆ ಇದೊಂದು ಚೌಕಾಕಾರದ ಒಂದು ತಂತಿ. ಇದು ರಿಕ್ಷಾದ ಎದುರು ಚಕ್ರ ಅಥವಾ ಎಂಜಿನ್‌ನಿಂದ ಮೀಟರ್‌ಗೆ ನೇರವಾಗಿ ಸಂಪರ್ಕ ಹೊಂದಿರುತ್ತದೆ. ಚಕ್ರ ತಿರುಗಿದಂತೆ ಈ ತಂತಿಯೂ ತಿರುಗಿ, ಮೀಟರ್‌ನಲ್ಲಿನ ಕಿಲೋಮೀಟರ್ ಅಂಕಿಗಳನ್ನು ಬದಲಿಸುತ್ತದೆ. ಈಗ ಮೀಟರ್ ಡಿಜಿಟಲ್‌ಕರಣಗೊಂಡಿರುವ ಕಾರಣ, ಅಂಕಿಗಳು ಸಹ ಡಿಜಿಟಲ್ ಸ್ವರೂಪ ಹೊಂದಿವೆ. ಮೀಟರ್‌ನಲ್ಲೇ ಒಂದು ಸ್ಮರಣ ಕೋಶ ಸಹ ಇದ್ದು, ಇದು ರಿಕ್ಷಾ ಚಾಲನೆಗೊಂಡ ಸಮಯವನ್ನೂ ತೋರುತ್ತದೆ.



### ರಿವರ್ಸ್ ಗಿಯರ್

ಆಟೊ ಮೂರು ಚಕ್ರದ ವಾಹನವೇ ಆದರೂ, ಇದಕ್ಕೆ ರಿವರ್ಸ್ ಗಿಯರ್ ಇದೆ. ಸಾಮಾನ್ಯವಾಗಿ ಆಟೋರಿಕ್ಷಾಗೆ ನಾಲ್ಕು ಗಿಯರ್‌ಗಳು ಇರುತ್ತವೆ. ಇವುಗಳ ಸಂಪೂರ್ಣ ನಿಯಂತ್ರಣ ಹ್ಯಾಂಡಲ್‌ಬಾರ್‌ನಲ್ಲೇ. ಆದರೆ ಇತ್ತೀಚಿನ ದೊಡ್ಡ ಎಂಜಿನ್ ಸಾಮರ್ಥ್ಯದ ಗೂಡ್ಸ್ ಆಟೊಗಳಲ್ಲಿ ಕಾಲಿನಲ್ಲಿ ಕ್ಲಚ್ ಇರುತ್ತದೆ. ಆದರೆ ಆಟೊಗಳಿಗೆ ರಿವರ್ಸ್ ಗಿಯರ್ ಇರುವುದು ಮಾತ್ರ ವರದಾನವೇ ಸರಿ. ಏಕೆಂದರೆ ಹಿಂದೆ ಎರಡು ಚಕ್ರಗಳಿರುವ ಕಾರಣ, ದೂಡಿ ಹಿಂದಕ್ಕೆ ತಳ್ಳುವುದು ಅಸಾಧ್ಯ. ಪ್ರಯಾಣಿಕ ರಿಕ್ಷಾಗಳಿಗೆ ಇತ್ತೀಚಿನವರೆಗೂ ರಿವರ್ಸ್ ಗಿಯರ್ ನೀಡುತ್ತಲೇ ಇರಲಿಲ್ಲ. ಈಗಲೂ ರಿಕ್ಷಾ ನಿಂತಾಗ ದೂಡೇ ಹಿಂದಕ್ಕೆ ತಳ್ಳುವ ಅಭ್ಯಾಸ ಇದೆ. ಆದರೆ ಎಂಜಿನ್ ಸಾಮರ್ಥ್ಯ ಹೆಚ್ಚಿದಂತೆ ತೂಕ ಹೆಚ್ಚುವ ಕಾರಣ, ರಿವರ್ಸ್ ಗಿಯರ್ ಅನಿವಾರ್ಯವಾಗಿದೆ.

– ಎನ್ಕೆ



ಬೆಲ್ಲದ ಮೂಲಕ ಹೆಚ್ಚು ನೊಣಗಳನ್ನು ಆಕರ್ಷಿಸಬಹುದು ಎಂಬುದು ನಿಜ. ಆದರೆ ಅವು ಅದಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಕೊಳೆತ ಮೀನಿಗೂ ಮುತ್ತಿಕೊಳ್ಳುತ್ತವೆ ಎಂಬುದನ್ನು ಮರೆಯುವಂತಿಲ್ಲ.

–ಸೇಲ್ಸ್‌ಮನ್ ಒಬ್ಬನ ಸಾಮಾನ್ಯ ಜ್ಞಾನ

ಪ್ರಜಾವಾಣಿ
ಕಾಮನಬಿಲ್ಲು

ಗ್ಯಾಜೆಟ್ ಲೋಕ

ಯು.ಬಿ. ಪವನಜ
gadgetloka@gmail.com

# ಎಲ್‌ಜಿ ಒಪ್ಟಿಮಸ್ 3ಡಿ ಫೋನ್



ಎಲ್‌ಜಿ ಒಪ್ಟಿಮಸ್ 3ಡಿ ಸ್ಮಾರ್ಟ್‌ಫೋನನ್ನು ಫೋನ್ ಎನ್ನುವ ಬದಲು ಮೂರು ಆಯಾಮದ ಕ್ಯಾಮರದ ಜೊತೆಗೆ ಒಂದು ಮೊಬೈಲ್ ಫೋನ್ ಉಚಿತ ಎಂದು ಕರೆಯಬಹುದು. ಆದರ ಬಗ್ಗೆ ಈ ಸಲ ತಿಳಿದುಕೊಳ್ಳೋಣ.




ಫೋನ್‌ಗಳು ವಿಕಾಸಗೊಂಡು ಸ್ಮಾರ್ಟ್‌ಫೋನ್‌ಗಳಾದವು. ಸ್ಮಾರ್ಟ್‌ಫೋನ್‌ಗಳನ್ನು ಎಲ್ಲರೂ ಕೊಂಡುಕೊಂಡ ನಂತರ ತಯಾರಾದ ಸ್ಮಾರ್ಟ್‌ಫೋನ್‌ಗಳನ್ನು ಮಾರುವುದು ಹೇಗೆ? ಅದಕ್ಕೆ ಒಂದಿಷ್ಟು ಹೊಸ ಹೊಸ ಸವಲತ್ತುಗಳನ್ನು ಸೇರಿಸಿದಾಗ ಮತ್ತೆ ಅವುಗಳ ಮಾರಾಟ ಆಗುತ್ತದೆ. ಈ ಸರಣಿ ಮುಂದುವರಿಯುತ್ತದೆ. ಇದೇ ತರ್ಕವನ್ನು ಅನುಸರಿಸಿ ಸ್ಮಾರ್ಟ್‌ಫೋನ್‌ಗಳಿಗೆ ಕ್ಯಾಮರಾ ಅಳವಡಿಸಲಾಯಿತು. ಕ್ಯಾಮರಾಗಳ ಮೆಗಾಪಿಕ್ಸೆಲ್ ಹೆಚ್ಚಿಸುತ್ತಲೇ ಹೋದರು. ನೋಕಿಯಾದವರು ಹಾಗೆ ಮಾಡುತ್ತ 41 ಮೆಗಾಪಿಕ್ಸೆಲ್ ಕ್ಯಾಮರಾ ಉಳ್ಳ ಫೋನ್ ತಯಾರಿಸಿದ್ದಾರೆ. ಸರಿ. ಮುಂದೇನು? ಇನ್ನೇನು ಅಳವಡಿಸಬಹುದು? ಆಗ ಹೊಳೆದ ಉತ್ತರ 3 ಆಯಾಮದ ಕ್ಯಾಮರ. ಎಲ್‌ಜಿ ಕಂಪೆನಿಯವರು 3 ಆಯಾಮದ ಕ್ಯಾಮರ ಉಳ್ಳ ಫೋನ್ ತಯಾರಿಸಿದ್ದಾರೆ. ಅಥವಾ ಸರಿಯಾಗಿ ಹೇಳುವುದಾರೆ ಮೂರು ಆಯಾಮದ ಕ್ಯಾಮರ ಜೊತೆ ಫೋನ್ ಅಳವಡಿಸಿದ್ದಾರೆ. ಅದುವೇ ಎಲ್ ಜಿ ಒಪ್ಟಿಮಸ್ 3ಡಿ ಪಿ 725 (LG Optimus 3D P725). ಈಗ ಅದರ ಗುಣಾವಗುಣಗಳ ಕಡೆ ಕಣ್ಣು ಹಾಯಿಸೋಣ.

ಮೊದಲನೆಯದಾಗಿ ಗುಣವೈಶಿಷ್ಟ್ಯಗಳು. 1.2 ಗಿಗಾಹರ್ಟ್ಸ್ ಡ್ಯುವಲ್ ಕೋರ್ (ಅಂದರೆ ಎರಡು ಹೃದಯಗಳು), 8 + 1 ಗಿಗಾಬೈಟ್ ಮೆಮೊರಿ, ಅದರಲ್ಲಿ ಸುಮಾರು 5.3 ಗಿಗಾಬೈಟ್‌ಗಳಷ್ಟು ಬಳಕೆದಾರರಿಗೆ ಲಭ್ಯ, 2ಜಿ ಮತ್ತು 3ಜಿ ನೆಟ್‌ವರ್ಕ್ ಸೌಲಭ್ಯ, ಅಂತರಜಾಲ ಸಂಪರ್ಕ, 3 ಆಯಾಮ ಸೌಲಭ್ಯವುಳ್ಳ ಎಲ್‌ಸಿಡಿ ಸ್ಪರ್ಶಸಂವೇದಿ ಗೊರಿಲ್ಲ ಗ್ಲಾಸ್ ಪರದೆ, 16 ಮಿಲಿಯನ್ ಬಣ್ಣಗಳು, 480x800 ಪಿಕ್ಸೆಲ್ ಪರದೆ, 32 ಗಿಗಾಬೈಟ್ ತನಕ ಅಧಿಕ ಮೆಮೊರಿ ಮೈಕ್ರೊಎಸ್‌ಡಿ ಕಾರ್ಡ್ ಮೂಲಕ, ವೈಫೈ ಮತ್ತು ಬ್ಲೂಟೂತ್ ಸಂಪರ್ಕ ಸೌಲಭ್ಯ, 5 ಮೆಗಾಪಿಕ್ಸೆಲ್ ಪ್ರಾಥಮಿಕ ಮೂರು ಆಯಾಮದ ಅಂದರೆ ಎರಡು ಲೆನ್ಸ್ ಉಳ್ಳ ಮುಂದುಗಡೆಯ ಕ್ಯಾಮರ ಮತ್ತು 0.3 ಮೆಗಾಪಿಕ್ಸೆಲ್‌ನ ಇನ್ನೊಂದು ಎದುರುಗಡೆ ಕ್ಯಾಮರ, ಎಫ್‌ಎಂ ರೇಡಿಯೋ, ಎಂಪಿ3 ಮತ್ತು ಎಂಪಿ4 ಪ್ಲೇಯರ್, 3.5 ಮಿಮಿ ಆಡಿಯೋ ಇಯರ್‌ಫೋನ್ ಕಿಂಡಿ, 1520 mAH ಬ್ಯಾಟರಿ, ಆಂಡ್ರೋಯಿಡ್ 2.3, ಇತ್ಯಾದಿ. ಬೆಲೆ ಸುಮಾರು 29 ಸಾವಿರ ರೂ (flipkart.com).

ಇದರ ಧ್ವನಿ ಗುಣಮಟ್ಟ ಚೆನ್ನಾಗಿದೆ. ಉತ್ತಮ ಎಂಪಿ3 ಪ್ಲೇಯರ್ ಆಗಿ ಬಳಸಬಹುದು. ಇದರ ಜೊತೆ ದೊರೆಯುವ ಇಯರ್‌ಫೋನ್‌ನ ಗುಣಮಟ್ಟವೂ ಪರವಾಗಿಲ್ಲ. ಆದರೆ ಕ್ರಿಯೇಟಿವ್ ಇಪಿ 630 ಇಯರ್ ಫೋನ್‌ನ ಗುಣಮಟ್ಟಕ್ಕಿಂತ ಸ್ವಲ್ಪ ಕಡಿಮೆ ಎನ್ನಬಹುದು. ಎಫ್‌ಎಂ ರೇಡಿಯೋದ ಗುಣಮಟ್ಟ ಅಂತಹ ಹೇಳಿಕೊಳ್ಳುವಂತೇನೂ ಇಲ್ಲ. ಮನೆಯ ಒಳಗೆ ಅಷ್ಟೇನೂ ಅದ್ಭುತವಾಗಿ ಬರುವುದಿಲ್ಲ. ಆದರೆ ಹೊರಗಡೆ ಚೆನ್ನಾಗಿ ಬರುತ್ತದೆ. ಇದರ ಸ್ಪೀಕರ್ ಚೆನ್ನಾಗಿದೆ. ಕರೆಗಳ ಗುಣಮಟ್ಟ ಚೆನ್ನಾಗಿದೆ. ಧ್ವನಿಯ ಮಟ್ಟ (ವಾಲ್ಯೂಮ್) ಚೆನ್ನಾಗಿದೆ. ಒಟ್ಟಿನಲ್ಲಿ ಕರೆ ಮಾಡಲು ಮತ್ತು ಸ್ವೀಕರಿಸಲು ಉತ್ತಮ ಫೋನ್.

ಬ್ಯಾಟರಿ ಶಕ್ತಿ ಅಷ್ಟಕ್ಕಷ್ಟೆ. ಬೆಳಿಗ್ಗೆ ಚಾರ್ಜ್ ಮಾಡಿದರೆ ಸಾಯಂಕಾಲಕ್ಕೆ ಬ್ಯಾಟರಿ ಮುಗಿರುತ್ತದೆ. ಇದು ಅಂತರಜಾಲ ಸಂಪರ್ಕ, ಇಮೈಲ್, ಫೇಸ್ ಬುಕ್, ಟ್ವಿಟ್ಟರ್, ಇತ್ಯಾದಿಗಳನ್ನು ಬಳಸಿದರೆ. ಹಾಗೆ ನೋಡಿದರೆ ಎಲ್ಲ ಸ್ಮಾರ್ಟ್‌ಫೋನ್‌ಗಳ ಹಣೆಬರಹವೂ ಇಷ್ಟೆ. ಯಾವ ಸ್ಮಾರ್ಟ್‌ಫೋನೂ 24 ಗಂಟೆ ಶಕ್ತಿ ಹೊಂದಿರುವುದಿಲ್ಲ. ಎಲ್ಲವನ್ನೂ ರಾತ್ರಿ ಹೊತ್ತಿಗೆ ಚಾರ್ಜಿಗೆ ಹಾಕಬೇಕಾಗುತ್ತದೆ.

ಈ ಫೋನಿನ ವಿಶೇಷ ಇರುವುದು ಮೂರು ಆಯಾಮದ ಕ್ಯಾಮರಾದಲ್ಲಿ. ಒಂದರಿಂದ ಇನ್ನೊಂದಕ್ಕೆ ಸುಮಾರು ಒಂದು ಇಂಚು ದೂರ ಇರುವಂತೆ ಎರಡು ಕ್ಯಾಮರಾಗಳನ್ನು ಅಳವಡಿಸಲಾಗಿದೆ. ಇದು ನಮ್ಮ ಎರಡು ಕಣ್ಣುಗಳನ್ನು ಅನುಕರಿಸುತ್ತದೆ. ಮೂರು ಆಯಾಮ ಚಿತ್ರ ನಮ್ಮ ಮೆದುಳಿನಲ್ಲಿ ಮೂಡಲು ನಮಗೆ ಇರುವ ಎರಡು ಕಣ್ಣುಗಳು ಸಹಾಯ ಮಾಡುತ್ತವೆ. ಎಡದ ಕಣ್ಣು ನೋಡುವ ಚಿತ್ರ ಬಲದ ಕಣ್ಣು ನೋಡುವ ಚಿತ್ರಕ್ಕಿಂತ ಸ್ವಲ್ಪ ಭಿನ್ನವಾಗಿರುತ್ತದೆ. ಇದನ್ನೇ ಈ ಫೋನಿನ ಕ್ಯಾಮರ ಅನುಕರಿಸುತ್ತದೆ. ಎಡದ ಕ್ಯಾಮರಾದಲ್ಲಿ ತೆಗೆದ ಫೋಟೋವನ್ನು ಎಡದ ಕಣ್ಣಿಗೆ ಮತ್ತು ಬಲದ ಕ್ಯಾಮರಾದಲ್ಲಿ ತೆಗೆದ ಫೋಟೋವನ್ನು ಬಲದ ಕಣ್ಣಿಗೆ ಬೀಳುವಂತೆ ಪರದೆಯ ವಿನ್ಯಾಸ ಮಾಡಲಾಗಿದೆ. ಇದರಿಂದ ಮೂರು ಆಯಾಮದ ಚಿತ್ರ ನೋಡಿದ ಭಾವನೆ ಉಂಟಾಗುತ್ತದೆ. ಮೂರು ಆಯಾಮದ ವೀಡಿಯೋ ಕೂಡ ತಯಾರಿಸಿ ನೋಡಬಹುದು. ಮೂರು ಆಯಾಮದಲ್ಲಿ ನೋಡಲು ಪ್ರತ್ಯೇಕ ಕನ್ನಡಕದ ಅಗತ್ಯವಿಲ್ಲ. ಈ ಕ್ಯಾಮರ ಫೋನಿನಲ್ಲಿ ತೆಗೆದ ಮೂರು ಆಯಾಮದ ಫೋಟೋ ಮತ್ತು ವೀಡಿಯೋಗಳು ಚೆನ್ನಾಗಿವೆ. ಫೋನ್ ಜೊತೆ ಕೆಲವು ಮೂರು ಆಯಾಮದ ಆಟಗಳು ಮತ್ತು ಒಂದು ಕಾರ್ಟೂನ್ ಲಭ್ಯ. ಇವು ಚೆನ್ನಾಗಿವೆ. ಮೂರು ಆಯಾಮವನ್ನು ಅನುಭವಿಸಿಯೇ ತಿಳಿಯಬೇಕು. ಆ ಫೋಟೋಗಳನ್ನು ಈ ಪತ್ರಿಕೆಯಲ್ಲಿ ಮುದ್ರಿಸುವಂತಿಲ್ಲ. ಮೂರು ಆಯಾಮದ ವೀಡಿಯೋವನ್ನು ನಿಮ್ಮಲ್ಲಿ ಮೂರು ಆಯಾಮದ ಟಿವಿ ಇದ್ದಲ್ಲಿ ಅದಕ್ಕೆ ಜೋಡಿಸಿ ವೀಕ್ಷಿಸಬಹುದು. ಹೈಡೆಫಿನಿಶನ್ ವೀಡಿಯೋ ಕೂಡ ತಯಾರಿಸಬಹುದು ಮತ್ತು ವೀಕ್ಷಿಸಬಹುದು.

ಇದರ 4.3 ಇಂಚು ಗಾತ್ರದ ಪರದೆ ಚೆನ್ನಾಗಿದೆ. ಸ್ಪರ್ಶಸಂವೇದಿಯಾಗಿದೆ. ಉತ್ತಮ ಗುಣಮಟ್ಟದ ಗೊರಿಲ್ಲ ಗ್ಲಾಸ್ ಅಳವಡಿಸಲಾಗಿದೆ. ಬಣ್ಣಗಳ ಗುಣಮಟ್ಟವೂ ಚೆನ್ನಾಗಿದೆ. ಒಟ್ಟಿನಲ್ಲಿ ಉತ್ತಮ ಅನುಭವ ನೀಡುತ್ತದೆ.

ಈ ಫೋನಿನ ಒಂದೇ ಒಂದು ಪ್ರಮುಖ ಕೊರತೆಯೆಂದರೆ ಕನ್ನಡದ ಸೌಲಭ್ಯ ಇಲ್ಲದಿರುವುದು. ◆

### ಗ್ಯಾಜೆಟ್ ಸಲಹೆ

ವಿಜಯ್ ಅವರ ಪ್ರಶ್ನೆ: ನಾವು ಅಂತರಜಾಲ ತಾಣಗಳ ಮೂಲಕ ಗ್ಯಾಜೆಟ್ ತರಿಸಿ, ನಂತರ ಅವು ಹಾಳಾದರೆ ಯಾರ ಮೂಲಕ ಗ್ಯಾರಂಟಿ ಪಡೆದು ಅದನ್ನು ದುರಸ್ತಿ ಮಾಡಿಸಬೇಕು?

ಉ: ಸಾಮಾನ್ಯವಾಗಿ ಈ ಪ್ರಶ್ನೆಗೆ ಉತ್ತರವನ್ನು ಆಯಾ ಜಾಲತಾಣದಲ್ಲೇ ನೀಡಿರುತ್ತಾರೆ. ಎಲ್ಲ ಕಂಪೆನಿಗಳು ಉತ್ಪನ್ನವನ್ನು ಕೊಂಡ ದಾಖಲೆ ಮತ್ತು ತಾರೀಕನ್ನು ತೋರಿಸಿದರೆ ಅದು ಗ್ಯಾರಂಟಿಯಲ್ಲಿ ಇದೆ ಎಂದಾದರೆ ಉಚಿತವಾಗಿ ದುರಸ್ತಿ ಮಾಡುತ್ತಾರೆ. ಆದುದರಿಂದ ಉತ್ಪನ್ನ ಕೋರಿಯರ್‌ನಲ್ಲಿ ಬಂದಾಗ ಅದರ ಜೊತೆ ಇರುವ ಇನ್ ವಾಯಿಸ್ ಅನ್ನು ಸುರಕ್ಷಿತವಾಗಿ ಇಟ್ಟುಕೊಳ್ಳತಕ್ಕದ್ದು. ಕೆಲವು ಜಾಲತಾಣಗಳು ಉತ್ಪನ್ನವನ್ನು ಎಲ್ಲಿಗೆ ಕಳುಹಿಸತಕ್ಕದ್ದು ಎಂಬುದನ್ನೂ ನಮೂದಿಸಿರುತ್ತಾರೆ. ಅನುಮಾನವಿದ್ದಲ್ಲಿ ಅವರಿಗೆ ಇಮೈಲ್ ಮಾಡಿ ತಿಳಿದುಕೊಳ್ಳಬಹುದು.